
# ಸ್ವಾಮಿ ಬೋಧಾನಂದ (೧೮೭೦-೧೯೫೦)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೩**

**ಬಾ**ಬುರಾಮ ಮಹಾರಾಜರ ಪ್ರತಿಯೊಂದು ಕಾರ್ಯದಲ್ಲೂ ಅವರ ಸಾಧುತ್ವವು ಕಂಡು ಬರುತ್ತಿತ್ತು. ದಿನವೆಲ್ಲ ಕೆಲಸದಲ್ಲಿ ನಿರತರಾಗಿರುತ್ತಿದ್ದರು. ಎಲ್ಲರಿಗಿಂತಲೂ ಮುಂಚೆ ಹಾಸಿಗೆಯಿಂದೇಳುತ್ತಿದ್ದು, ಎಲ್ಲರ ನಂತರ ಮಲಗುತ್ತಿದ್ದರು. ಮಧ್ಯಾಹ್ನ ಅವರು ವಿಶ್ರಮಿಸುತ್ತಿರಲಿಲ್ಲ. ಒಂದು ವೇಳೆ ಹಾಗೆ ಮಾಡಿದರೂ, ಸ್ವಲ್ಪವೇ ಹೊತ್ತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಠಾಕೂರರಿಗಾಗಿಯೆ ಸರ್ವ ಕಾರ್ಯಗಳನ್ನು ಮಾಡುತ್ತಿದ್ದರೆಂಬುದು ಚೆನ್ನಾಗಿಯೇ ತಿಳಿಯುತ್ತಿತ್ತು. ಪ್ರತಿಯೊಂದು ಕೆಲಸವೂ ಎಲ್ಲಾ ರೀತಿಯಲ್ಲೂ ಸುಂದರವಾಗಿರಬೇಕು. ಸಾಮಾನ್ಯ ಕೆಲಸಗಳನ್ನೂ ಶಿಸ್ತುಬದ್ಧವಾಗಿ ಮಾಡುತ್ತಿದ್ದರು. ಹಗಲಿರುಳೂ ಠಾಕೂರರ ಬಗ್ಗೆ ಮಾತನಾಡುತ್ತಿದ್ದರು. ಹೀಗೆ ಮಾತನಾಡುತ್ತಿದ್ದಾಗ ಉತ್ತೇಜಿತರಾಗುತ್ತಿದ್ದರು. ಠಾಕೂರರ ಶಿಷ್ಯರುಗಳಲ್ಲಿ ಅವರ ಬಗ್ಗೆ ಅತಿ ಹೆಚ್ಚು ಮಾತನಾಡುತ್ತಿದ್ದವರೆಂದರೆ ಬಾಬುರಾಮ ಮಹಾರಾಜರು, ಆದರೆ ಎಲ್ಲರಿಗಿಂತಲೂ ಕಡಿಮೆ ಮಾತನಾಡುತ್ತಿದ್ದರು. 'ಠಾಕೂರರ ಕೃಪೆಯಾದರೆ ಆಗುತ್ತದೆ' - ಈ ರೀತಿ ಹೇಳುತ್ತಿರಲಿಲ್ಲ. ಅವರು ತಮ್ಮ ಸಂಪೂರ್ಣ ನಿಶ್ಚಿತ ಅಭಿಮತವನ್ನು ನೀಡುತ್ತಿದ್ದರು - ಠಾಕೂರರ ಬಳಿ ಬಂದವರೆಲ್ಲ ಮುಕ್ತರಾಗುವರು. ಅವರೆ ಧನ್ಯರು! ಅವರ ಪ್ರತಿಯೊಂದು ಮಾತು ಕೂಡ ಪ್ರಜ್ವಲಿಸುವ ಅಗ್ನಿಸ್ಫುಲಿಂಗದಂತೆ. ಅವರದು ಅತ್ಯಂತ ಮಧುರ ಸ್ವಭಾವ! ಮಾತನಾಡುವಾಗ, ಅವರು ಬೆಂಕಿಯಂತೆ, ಖಡಾಖಂಡಿತವಾಗಿ ಮಾತನಾಡುತ್ತಿದ್ದರು. ಅವರು ಅತಿ ಸಹಜವಾಗಿ ತಮ್ಮ ಮಾತುಗಳಿಂದ ಜನರಲ್ಲಿ ಉತ್ಸಾಹವನ್ನು ತುಂಬಬಲ್ಲವರಾಗಿದ್ದರು.

ಬಾಬುರಾಮ ಮಹಾರಾಜರು ಅತ್ಯಂತ ನಿರಭಿಮಾನಿಗಳು. ಅಹಂಕಾರದ ಲೇಶಮಾತ್ರವೂ ಅವರಲ್ಲಿರಲಿಲ್ಲ. ಒಮ್ಮೆ ಅವರಲ್ಲಿ ಸ್ವಲ್ಪ ಅಹಂಕಾರವು ಹೆಡೆಯೆತ್ತಿತ್ತು. ಬೇಲೂರು ಮಠದಲ್ಲಿ ಠಾಕೂರರು ಅವರಿಗೆ ದರ್ಶನವಿತ್ತು 'ಹೇಗೆ ಬೇಕಾದರೂ ಕುಣಿ, ನಿನ್ನ ಬಿಗಿದಿರಿಸುವ ಹಗ್ಗ ನನ್ನ ಕೈಲಿದೆ (ವಾನರ ನೃತ್ಯದ ಉಪಮೆ)' ಎಂದರು. ಬಾಬುರಾಮ ಮಹಾರಾಜರು ಲಜ್ಜೆ ಹಾಗು ದುಃಖದಿಂದ ಠಾಕೂರರೆದುರು ಕೈಮುಗಿದು ಕ್ಷಮೆಗಾಗಿ ಪ್ರಾರ್ಥಿಸಿದರು. ಠಾಕೂರರು ಅವರಿಂದ ದೂರ ಸರಿಯುತ್ತಿದ್ದರೆ, ಬಾಬುರಾಮ ಮಹಾರಾಜರು ಅವರತ್ತ ಸಾಗುತ್ತಿದ್ದರು. ಈ ದೃಶ್ಯವನ್ನು ದೂರದಿಂದ ನೋಡುತ್ತಿದ್ದ ಮಹಾಪುರುಷ ಮಹಾರಾಜರು, ನಂತರ ವಿಷಯವೇನೆಂದು ಕೇಳಿದಾಗ ಬಾಬುರಾಮ ಮಹಾರಾಜರು ಮೇಲಿನ ಘಟನೆಯನ್ನು ಅವರಿಗೆ ವಿವರಿಸಿದರು.



ಬಾಬುರಾಮ ಮಹಾರಾಜರು ಸಸ್ಯಾಹಾರಿಗಳು. ಹುಡುಗರು ಮೀನು ತಿನ್ನುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಠಾಕೂರರು ಸ್ವಪ್ನದಲ್ಲಿ ಕಾಣಿಸಿಕೊಂಡು ಅದಕ್ಕಾಗಿ ಅವರನ್ನು ಬೈದರು. ತಮ್ಮ ಅಹಂಕಾರವನ್ನು ದೂರ ಮಾಡಲು ಬಾಬುರಾಮ ಮಹಾರಾಜರು ಅಡಿಗೆ ಮನೆಯ ಪಶ್ಚಿಮ ದಿಕ್ಕಿಗೆ ಹೋಗಿ ಮೀನಿನ ಒಂದು ಸಣ್ಣ ತುಂಡನ್ನು ಬಾಯಿಗೆ ಹಾಕಿಕೊಂಡರು.

ಸೂರ್ಯ ಮಹಾರಾಜರು ಮಂಜುಗಡ್ಡೆಯನ್ನು ಮುರಿಯುತ್ತಿದ್ದಾಗ ಅದು ಪುಡಿ ಪುಡಿಯಾಗುತ್ತಿರುವುದನ್ನು ಕಂಡ ಬಾಬುರಾಮ ಮಹಾರಾಜರು ಅವರನ್ನು ಬಯ್ಯತೊಡಗಿದರು. ಬಳಿಕ ತಾವೇ ಅದನ್ನು ತುಂಡರಿಸಲು ಸುತ್ತಿಗೆ ತೆಗೆದುಕೊಂಡು ಬಂದರು. ಸೂರ್ಯ ಮಹಾರಾಜರು ಆಗ ಉತ್ತೇಜಿತರಾಗಿ ಹೇಳಿದರು, 'ನೀವೇಕೆ ಇಲ್ಲಿಗೆ ಬಂದಿರಿ? ಇಲ್ಲಿಂದ ಹೊರಟು ಹೋಗಿ.' ಸೂರ್ಯ ಮಹಾರಾಜರು ಕೋಪಗೊಂಡಿರುವರೆಂದು ಬಾಬುರಾಮ ಮಹಾರಾಜರಿಗೆ ಅರ್ಥವಾಯಿತು. ಅವರು ಹೊರಟು ಹೋದರು. ನಂತರ ಅವರು ಹಿಂದಿನಿಂದ ಬಂದು ಸೂರ್ಯ ಮಹಾರಾಜರನ್ನು ತಬ್ಬಿಕೊಂಡು ಹೇಳಿದರು, 'ನೀನು ನನ್ನ ಮೇಲೆ ಕೋಪಗೊಂಡಿರುವೆಯಾ?' ಸೂರ್ಯ ಮಹಾರಾಜರು, 'ಹೌದು, ನೀವು ಆ ಕೆಲಸ ಮಾಡಿದರೆ ಜನ ನಮ್ಮ ಬಗ್ಗೆ ಏನೆಂದುಕೊಳ್ಳುವರು?' ಎಂದರು. ಅಷ್ಟರ ಮಟ್ಟಿಗೆ ಬಾಬುರಾಮ ಮಹಾರಾಜರು ನಿರಭಿಮಾನಿಗಳಾಗಿದ್ದರು. 'ಸಾಧುವಿನ ಕೋಪ ನೀರಿನ ಮೇಲಿನ ಗೆರೆಯಂತೆ'. ಬಾಬುರಾಮ ಮಹಾರಾಜರು ಎಷ್ಟೇ

ಕೋಪಗೊಂಡರೂ ಮರುಕ್ಷಣವೇ ಅದು ಮಾಯವಾಗಿಬಿಡುತ್ತಿತ್ತು. ಇತರರಿಗೆ ಈ ವಿಷಯ ತಿಳಿದಿತ್ತು. ಒಂದು ದಿನ ಅವರು ಮಹಾರಾಜರ ಬಳಿ ಹೋಗಿ, 'ಮಹಾರಾಜ್, ಇವರುಗಳಾರೂ ನನಗೆ ಸ್ವಲ್ಪವೂ ಹೆದರುವುದಿಲ್ಲ' ಎಂದು ದೂರಿದರು.

ಬಾಬುರಾಮ ಮಹಾರಾಜರು ತ್ಯಾಗೀ ಪುರುಷರು. ಅವರ ಬಳಿ ಇದ್ದುದು ಕೆಲವೇ ಬಟ್ಟೆಬರೆಗಳು ಹಾಗು ಅರ್ಧಕೈಯ ಮೇಲಂಗಿ. ಶೀತವಸ್ತ್ರಗಳೂ ಹೆಚ್ಚಾಗಿ ಇರಲಿಲ್ಲ. ತುಂಬ ಕಡಿಮೆ ಆಹಾರವನ್ನು ತಿನ್ನುತ್ತಿದ್ದರೂ, ಅತಿ ಹೆಚ್ಚು ಕೆಲಸ ಮಾಡಬಲ್ಲವರಾಗಿದ್ದರು. ಒಳ್ಳೆ ತಿನಿಸುಗಳನ್ನು ಅವರ ಎಲೆಗೆ ಬಡಿಸಿದರೆ ಅದನ್ನು ತಾವು ತಿನ್ನದೆ ಇತರರಿಗೆ ಕೊಟ್ಟುಬಿಡುವರು. ಆಹಾರದ ವಿಷಯದಲ್ಲಿ ಅವರು ಅತ್ಯಂತ ಸಂಯಮಿಗಳಾಗಿದ್ದರು.

ಒಮ್ಮೆ ಬಾಬುರಾಮ ಮಹಾರಾಜರು ಭಾಷಣ ನೀಡಲು ಕೃಷ್ಣನಗರಕ್ಕೆ ಹೋಗಿದ್ದರು. 'ನಾನೊಬ್ಬ ಮೂರ್ಖ' ಎಂದು ಪ್ರಾರಂಭಿಸಿದರು. ನಂತರ ಠಾಕೂರರ ಬಗ್ಗೆ ಜ್ವಾಲಾಮುಖಿಯಂತೆ ಮಾತನಾಡಿದರು. ಸಭಿಕರು ಮುಗ್ಧರಾಗಿ ಭಾಷಣವನ್ನು ಕೇಳತೊಡಗಿದರು. ಅವರದು ಅತಿ ಸರಳ ಭಾಷೆ – ಸಂಭಾಷಣೆಯ ಶೈಲಿ, ಆದರೆ ಅದರಲ್ಲಿ ಅಗ್ನಿಯ ತೇಜಸ್ಸು. ಅವರು ಸೃಷ್ಟಿಸಿದ ಆಧ್ಯಾತ್ಮಿಕ ವಾತಾವರಣದಿಂದ ಎಲ್ಲರೂ ಬೆರಗಾದರು. ಅವರ ನಂತರ ಸುಧೀರ ಮಹಾರಾಜರ ಸರದಿ. ಸುಧೀರ ಮಹಾರಾಜರು ವಿದ್ವಾಂಸರೂ ಒಳ್ಳೆಯ ಭಾಷಣಕಾರರಾಗಿದ್ದರೂ ಮಾತನಾಡುವಾಗ ತಡವರಿಸುತ್ತಿದ್ದರು – nervous ಆಗಿಬಿಟ್ಟರು.

ಶಶಿ ಮಹಾರಾಜರು ಒಮ್ಮೆ ಮದ್ರಾಸಿನಿಂದ ಮಠಕ್ಕೆ ಬಂದಿದ್ದಾರೆ. ರಾಜಾ ಮಹಾರಾಜರು ಹೆಚ್ಚು ಸಮಯ (ಸುಮಾರು ಹತ್ತು ಗಂಟೆಯವರೆಗೆ) ಧ್ಯಾನ ಮಾಡುತ್ತಿರುವುದನ್ನು ಗಮನಿಸಿದಾಗ ಸೇವಕರನ್ನು ಕರೆದು ಹೇಳಿದರು, ''ಏನು ಮಾಡುತ್ತಿರುವಿರಿ? ಮಹಾರಾಜರಿಗೆ ಇಷ್ಟೊಂದು ಧ್ಯಾನ ಮಾಡಲು ಬಿಟ್ಟಿರುವಿರಲ್ಲ! ಸರ್ವನಾಶ! (ಅರ್ಥಾತ್ ಅವರು ಬಲು ಬೇಗನೆ ಪ್ರಪಂಚವನ್ನು ಬಿಟ್ಟು ಹೊರಟುಹೋಗುವರು).'' ಶಶಿ ಮಹಾರಾಜರು ತಾವೇ ಹೋಗಿ ಮಹಾರಾಜರನ್ನು ತಳ್ಳಿ ಅವರ ಧ್ಯಾನ ಭಂಗ ಮಾಡಿದರು.

ಅಮೆರಿಕದಲ್ಲಿ ಸ್ವಾಮೀಜಿ 'ಧ್ಯಾನ'ದ ತರಗತಿಗಳನ್ನು ನಡೆಸುತ್ತಿದ್ದರು. ಧ್ಯಾನ ಮಾಡುತ್ತ ಅವರು ಸಮಾಧಿಸ್ಥರಾದರು. ಬಾಹ್ಯ ಜ್ಞಾನವನ್ನು ಕಳೆದುಕೊಂಡರು. ಅನೇಕ ವಿದ್ಯಾರ್ಥಿಗಳು ಹೊರಟು ಹೋದರು. ಉಳಿದವರು ಸ್ವಾಮೀಜಿಯವರನ್ನು ಹಿಡಿದು ಬೇರೆ ಕೋಣೆಗೆ ಕರೆದೊಯ್ದರು. ಬಹಳ ಹೊತ್ತಿನ ಮೇಲೆ ಅವರ ಬಾಹ್ಯಪ್ರಜ್ಞೆ ಮರಳಿ ಬಂತು.

ಬಾಬುರಾಮ ಮಹಾರಾಜರು ಒಬ್ಬ ಭಕ್ತರ ಜಪಮಾಲೆಯನ್ನು ಪೋಣಿಸಲು ಸೂರ್ಯ ಮಹಾರಾಜರಿಗೆ ಕೊಡುತ್ತ, ಅದರಿಂದ ಜಪದ ಅರ್ಧ ಫಲ ಅವರಿಗೆ ದೊರೆಯುವುದೆಂದು ಹೇಳಿದರು. ಮತ್ತೊಂದು ದಿನ ಬಾಬುರಾಮ ಮಹಾರಾಜರು ತಮ್ಮ ಮಾಲೆಯನ್ನು ಪೋಣಿಸಲು ಕೊಟ್ಟಾಗ, ಸೂರ್ಯ ಮಹಾರಾಜರು 'ಜಪದ ಅರ್ಧ ಫಲ (ನನಗೆ) ಸಿಗುತ್ತದೆ' ಎಂದಾಗ ಅವರು ಮೊದಲು 'ಮಾಲೆಯನ್ನು ವಾಪಸ್ಸು ಕೊಡು' ಎನ್ನುತ್ತ ಜಪಸರವನ್ನು ಹಿಂದಕ್ಕೆ ತೆಗೆದುಕೊಂಡರು. ನಂತರ ಸ್ವಲ್ಪ ತಡೆದು, ಮತ್ತೆ ಜಪಮಾಲೆಯನ್ನು ಕೊಟ್ಟು ಹೇಳಿದರು, 'ತೆಗೆದುಕೊ. ಫಲವು ಸಂಪೂರ್ಣವಾಗಿ ನಿನ್ನದು.'

ಪೂರ್ಣ ಬಾಬು ಅಂತರ್ಮುಖಿ. ಕಡಿಮೆ ಮಾತನಾಡುತ್ತಿದ್ದರು. ಪ್ರಶ್ನೆ ಕೇಳಿದರೆ ಕೆಲವೊಮ್ಮೆ ಉತ್ತರಿಸುತ್ತಲೂ ಇರಲಿಲ್ಲ. ಅವರ ಮನಸ್ಸು ಬೇರೊಂದು ಜಗತ್ತಿನಲ್ಲಿರುವಂತೆ ತೋರುತ್ತಿತ್ತು. ಈ ಭಾವವು ಮಹಾರಾಜರಲ್ಲಿ ಕಂಡು ಬರುತ್ತಿತ್ತು, ಹಾಗೂ ಸ್ವಲ್ಪ ಮಟ್ಟಿಗೆ ಪೂರ್ಣ ಬಾಬುವಿನಲ್ಲಿ. ಇತರ ಯಾವ ಶಿಷ್ಯರಲ್ಲೂ ಈ ಭಾವವು ಸ್ಪಷ್ಟವಾಗಿ ಕಂಡುಬರುತ್ತಿರಲಿಲ್ಲ.

ಆನಂದ ಮೋಹನ ಬಸು (ಬ್ರಾಹ್ಮಸಮಾಜದ ನಾಯಕ ಹಾಗು ಸಿಟಿ ಕಾಲೇಜಿನ ಸ್ಥಾಪಕರು) ಸ್ವಾಮೀಜಿಯವರ ಬಹುಪಾಲು ಎಲ್ಲ ಕಲ್ಕತ್ತಾ ಭಾಷಣಗಳನ್ನು ಕೇಳಲು ಹೋಗುತ್ತಿದ್ದರು.

ನಿವೇದಿತಾ ಗಾಡಿಯಲ್ಲಿ ಹೋಗುತ್ತಿದ್ದಾಗ ಸುಕಿಯಾ ಸ್ಟ್ರೀಟ್‌ನಲ್ಲಿ ಗಾಡಿಯು ಒಂದು ನಾಯಿಮರಿಗೆ ಡಿಕ್ಕಿ ಹೊಡೆದು ಅಪಘಾತಕ್ಕೀಡಾಯಿತು. ಅದನ್ನು ಬದುಕಿಸಲು ಆಕೆ ಸಮೀಪದ ಅಂಗಡಿಯಿಂದ ಹಾಲು ಕೊಂಡು ತಂದು, ಬಹಳ ಹೊತ್ತು ಅದರ ಸೇವೆ ಮಾಡಿದರು. ಡಾರ್ಜಿಲಿಂಗ್‌ನಲ್ಲಿ ಅವರು ಜೆ.ಸಿ.ಬೋಸ್‌ರೊಂದಿಗೆ ಒಂದು ಹಿಮನದಿಯನ್ನು ವೀಕ್ಷಿಸಲು ಹೋಗಿದ್ದರು. ದಾರಿಯಲ್ಲಿ ಬೋಸ್‌ರನ್ನು ಹೊತ್ತವ ಚಳಿಯಿಂದ ಕಷ್ಟಪಡುತ್ತಿದ್ದಾಗ ನಿವೇದಿತಾ ತಮ್ಮದೇ ಕೋಟ್‌ಅನ್ನು ಅವನಿಗೆ ಕೊಟ್ಟರು.

ನಿವೇದಿತಾ ಅತ್ಯಂತ ತೇಜಸ್ವಿನಿ. ಆಕೆ ಭಾರತವನ್ನು ತುಂಬಾ ಪ್ರೀತಿಸುತ್ತಿದ್ದರು. ಭಾರತವನ್ನು ಈ ರೀತಿ ಪ್ರೀತಿಸಿದ ವಿದೇಶಿ ಬೇರೊಬ್ಬರಿಲ್ಲವೆಂದು ತೋರುತ್ತದೆ. ಅವರು ತಮ್ಮ ಲೇಖನಗಳನ್ನು ಸಂಪಾದಿಸಲು ಯಾರಿಗೂ ಕೊಡುತ್ತಿರಲಿಲ್ಲ, ಆದರೆ ರಾಮಾನಂದ ಚಟ್ಟೋಪಾಧ್ಯಾಯರಿಗೆ ('ಪ್ರವಾಸಿ' ಹಾಗು Modern Review ಪತ್ರಿಕೆಯ ಸಂಪಾದಕರು) ಅನುಮತಿ ನೀಡುತ್ತಿದ್ದರು. ''I have faith in your judgement'' (ನಿಮ್ಮ ನಿರ್ಣಯದಲ್ಲಿ ನನಗೆ ವಿಶ್ವಾಸವಿದೆ) ಎನ್ನುತ್ತಿದ್ದರು.

ಮಹಾಪುರುಷ ಮಹಾರಾಜರು ಡಾ. ಅಜಿತ ಬಾಬು ಅವರ ಮಸ್ತಕದ ಮೇಲೆ ತಮ್ಮ ಹಸ್ತವಿರಿಸಿ 'ನೀನು ಬಡವರ ಸೇವೆಯನ್ನು ಮಾಡುವಂತಾಗಲಿ' ಎಂದು ಆಶೀರ್ವದಿಸುತ್ತಿದ್ದರು. ಅನಾರೋಗ್ಯದಿಂದ ಪೀಡಿತರಾಗಿದ್ದರೂ ಅವರೆಂದೂ ಖಿನ್ನರಾಗಿರುತ್ತಿರಲಿಲ್ಲ.

ಬಲರಾಮ ಮಂದಿರದಲ್ಲಿದ್ದಾಗ ನಾನು ಮಹಾರಾಜರ ಕೋಣೆಯಲ್ಲೇ ಮಲಗುತ್ತಿದ್ದೆ. ಶರತ್ ಮಹಾರಾಜರು ಪ್ರತಿ ರಾತ್ರಿಯೂ ಮಲಗುವ ಮುನ್ನ ಹಾಸಿಗೆಯ ಮೇಲೆ ಸ್ವಲ್ಪ

ಹೊತ್ತು ಕುಳಿತು ಧ್ಯಾನ ಮಾಡುತ್ತಿದ್ದರು. ದಿನವಿಡೀ ತಾವು ಮಾಡಿದ ಕಾರ್ಯಕಲಾಪಗಳ ಬಗ್ಗೆ ವಿಶ್ಲೇಷಿಸುತ್ತಿದ್ದರು.

ಬಾಬುರಾಮ ಮಹಾರಾಜರು ನನಗೊಮ್ಮೆ ಹೇಳಿದ್ದರು: ''ಧ್ಯಾನ ಮಾಡಿ ದೇವರ ಕೋಣೆಯಿಂದ ಹೊರಗೆ ಬರುವ ಮುಂಚೆ 'ಶ,ಷ,ಸ' ೧೦೮ ಬಾರಿ ಜಪಿಸುತ್ತೇನೆ!''

ಸ್ವಾಮೀಜಿ ಒಂದು ಸಲ ಮಠದಲ್ಲಿ ಈ ನಿಯಮವನ್ನು ಮಾಡಿದರು – ಎಲ್ಲರೂ ನಿಯಮಾನುಸಾರ ಜಪಧ್ಯಾನಗಳನ್ನು ಮಾಡಬೇಕು. ಪ್ರತಿಯೊಂದು ಕಾರ್ಯವನ್ನೂ ಸಮಯಕ್ಕನು ಸಾರವಾಗಿ ಮಾಡಬೇಕು. ಹೀಗಿರುವಾಗ ಒಂದು ದಿನ ಭಕ್ತರೊಬ್ಬರು ಠಾಕೂರರಿಗಾಗಿ ಮೀನು ತಂದರು. ಅದನ್ನು ಮಧ್ಯಾಹ್ನವೆ ಠಾಕೂರರಿಗೆ ನಿವೇದಿಸಬೇಕೆಂದು ಕೆಲವರ ಇಚ್ಛೆ. ಆದರೆ ಅದರಿಂದ ನೈವೇದ್ಯ ತಡವಾಗುವುದೆಂದು ಸ್ವಾಮೀಜಿ 'ರಾತ್ರಿ ನಿವೇದನೆ ಮಾಡಲಾಗುವುದು' ಎಂದರು.

ಒಮ್ಮೆ ಯಾರೋ ಒಬ್ಬರು ಶರತ್ ಮಹಾರಾಜರೊಡನೆ ಒರಟಾಗಿ ವರ್ತಿಸಿದರು. ಆಗ ಒಬ್ಬರು ಶರತ್ ಮಹಾರಾಜರನ್ನು ಕೇಳಿದರು,'ಬಹುಶಃ ಅದು ನಿಮ್ಮ ಮನಸ್ಸಿಗೆ ನಾಟಿರಬೇಕು!' ಶರತ್ ಮಹಾರಾಜರು ಉತ್ತರಿಸಿದರು, 'ನನ್ನ ಮನಸ್ಸಿಗೆ ಕಷ್ಟವಾಗುವುದಾದರೂ ಹೇಗೆ? ನನಗೆ ಮನಸ್ಸು ಎಂಬುದೇನೂ ಇಲ್ಲ. ನನ್ನ ಮನ–ಬುದ್ಧಿಗಳನ್ನು ನಾನು ಠಾಕೂರರ ಚರಣಗಳಲ್ಲಿ ಸಮರ್ಪಿಸಿಬಿಟ್ಟಿದ್ದೇನೆ. ಈಗ ಎಲ್ಲವೂ ಅವರದೆ.'

ಹರಿ ಮಹಾರಾಜರು ಬೃಂದಾವನದಲ್ಲಿದ್ದಾಗ ನನಗೊಂದು ಪತ್ರ ಬರೆದಿದ್ದರು, 'ನೀನು ಪ್ರಾಮಾಣಿಕವಾಗಿ ಪ್ರಾರ್ಥನಾದಿಗಳನ್ನು ಮಾಡಿದ್ದೇ ಆದರೆ, ನೀನು ಯಾರ ಕೈಯಿಂದ ಏನು ತಿಂದರೂ, ಯಾವ ಹಾನಿಯೂ ಉಂಟಾಗದು; ನೀನು ಪ್ರಾರ್ಥನಾದಿಗಳನ್ನು ಮಾಡದಿದ್ದರೆ ಅದೆಷ್ಟು ಸಾತ್ತ್ವಿಕ, ಶುದ್ಧ ಆಹಾರವನ್ನು ಗ್ರಹಿಸಿದರೂ ಅದರಿಂದೇನೂ ಪ್ರಯೋಜನವಿಲ್ಲ.''

ಕಂಖಲ್‌ನಲ್ಲಿದ್ದಾಗ ಒಂದು ದಿನ ಸಾಯಂಕಾಲ ಹರಿ ಮಹಾರಾಜರ ಕೋಣೆಯೊಳಗೆ ಇಣುಕಿ ನೋಡಿದಾಗ ಅವರು ಮಲಗಿದ್ದುದು ಕಾಣಿಸಿತು. ಆದರೆ ಅವರು ಜಪಸರ ಹಿಡಿದು ಜಪ ಮಾಡುತ್ತಿದ್ದರು.

'ತಮಗೆ ಎಲ್ಲೆಡೆಯೂ ಬ್ರಹ್ಮದ ಅನುಭವವಾಗಿದೆಯೆ ?' ಎಂದು ನಾನೊಮ್ಮೆ ಶರತ್ ಮಹಾರಾಜರನ್ನು ಕೇಳಿದೆ. ಅವರು ಆಗಿದೆಯೆಂದರು. ಆಗ, ತಾವು ಒರಗಿ ಕುಳಿತ ಬೀರುವಿನಲ್ಲೂ ಬ್ರಹ್ಮ ದರ್ಶನವಾಗಿದೆಯೆ ಎಂದು ಕೇಳಿದಾಗ ಅವರು, ಹೌದು ಅದರಲ್ಲೂ ಬ್ರಹ್ಮವನ್ನು ಕಾಣುತ್ತೇನೆ ಎಂದು ಉತ್ತರಿಸಿದರು.

ಒಂದು ದಿನ, ಧ್ಯಾನ ಮಾಡುವಾಗ ನಮ್ಮ ಮನಸ್ಸು ಚತುರ್ದಿಕ್ಕಿನಲ್ಲೂ ವಿಕ್ಷಿಪ್ತಗೊಳ್ಳುವಂತೆ ಅವರಿಗೂ ಆಗುವುದೆ ಎಂದು ಅವರನ್ನು ಪ್ರಶ್ನಿಸಿದೆ. ಅವರು, ತಮಗೆ ಹಾಗಾಗುವುದಿಲ್ಲ, ಧ್ಯಾನಕ್ಕೆ ಕುಳಿತೊಡನೆಯೆ ಮನಸ್ಸು ಸ್ಥಿರವಾಗುತ್ತದೆ, ಏಕಮುಖಿಯಾಗಿ ಬಿಡುತ್ತದೆ ಎಂದು ಉತ್ತರಿಸಿದರು. ಶರತ್ ಮಹಾರಾಜರು ಹೇಳಿದರು: ಠಾಕೂರರು, 'ಪ್ರಭು! ನೀನೇ ನನ್ನ ಸರ್ವಸ್ವವೂ, ನನ್ನ ಪ್ರಾಣಾಧಾರ, ಸಾರದ ಸಾರ; ತ್ರಿಭುವನದಲ್ಲಿ ನೀನಲ್ಲದೆ ನನ್ನವರೆಂಬುವರು ಯಾರೂ ಇಲ್ಲ,' ಎನ್ನುತ್ತಿದ್ದರು. (ಹಾಡು: ನಾಥ, ತುಮಿ ಸರ್ವಸ್ವ ಆಮಾರ್...) ಈ ಹಾಡಿನ ಅರ್ಥವನ್ನು ಅನುಭವಿಸಿದವರು ಧರ್ಮಜೀವನದಲ್ಲಿ ಸರ್ವಸ್ವವನ್ನೂ ಪಡೆದಿರುವರು.

ಸನ್ಯಾಲ್ ಮಹಾಶಯರು ಒಂದು ದಿನ ಶರತ್ ಮಹಾರಾಜರಿಗೆಂದರು, 'ಗಾಂಧಿ ಹೇಗೆ ಕೆಲಸ ಮಾಡುತ್ತಿರುವರೆಂದು ನೋಡು. ಜನರ ಮೇಲೆ ಎಷ್ಟು ಪ್ರಭಾವ ಬಿರುತ್ತಿರುವರು! ನೀವೇನು ಮಾಡಿದಿರಿ.' ಈ ಮಾತುಗಳಿಂದ ಅಸಮಾಧಾನಗೊಂಡ ಶರತ್ ಮಹಾರಾಜರು 'ಇದೇನು ಹೇಳುತ್ತಿರುವೆ? ಭಗವಂತನು ಯಾರಿಂದ ಏನು ಮಾಡಿಸುವನೋ ಹಾಗೆಯೇ ಆಗುವುದು. ಭಗವಂತನು ಗಾಂಧಿಯವರಿಗೆ ನಿರ್ದೇಶಿಸುವ ಕಾರ್ಯವನ್ನೇ ಅವರು ಮಾಡುವರು. ನನ್ನ ಯೋಗ್ಯತೆ ಹಾಗೂ ಸಾಮರ್ಥ್ಯಕ್ಕೆ ತಕ್ಕಂತೆ ನಾನು ಮಾಡುವೆ. ಹೋಲಿಸುವುದೇಕೆ?' ಎಂದರು.

ರಾಜಾ ಮಹಾರಾಜರು ಹೇಳಿದ್ದರು, 'ನಿರ್ಭೀತಿ'– ಎಂದರೇನೆಂಬುದನ್ನು ಹೊರಗಿನಿಂದ ತಿಳಿಸಿಕೊಡಲಾಗದು, ಇದನ್ನು ಅರ್ಥಮಾಡಿಕೊಳ್ಳುವುದು ಬುದ್ಧಿಶಕ್ತಿಯಿಂದಲೂ ಸಾಧ್ಯವಿಲ್ಲ. ನಿಜವಾಗಿಯೂ ನಿರ್ಭೀತಿ ಬಂದಾಗ, ಅದು ಅಂತರಂಗಕ್ಕೆ ತಿಳಿಯುವುದು. ಅದರ ವಿಷಯವೇ ಬೇರೆ!'

ಒಬ್ಬರು ಅತ್ಯಂತ ಸ್ವಚ್ಛ ಹಾಗೂ ಚೊಕ್ಕವಾಗಿರುವುದನ್ನು ಕಂಡಾಗ ರಾಜಾ ಮಹಾರಾಜರು ಹೇಳಿದರು, 'ಠಾಕೂರರು ಬರಿಯ ದೇವರಕೋಣೆಯಲ್ಲಿ ಮಾತ್ರವೆ ಇರುವರೇನು? ಸ್ವಚ್ಛತೆ ಸೌಂದರ್ಯಗಳು ಇರುವಲ್ಲೆಲ್ಲ ಅವರಿದ್ದಾರೆ.'

ಹರಿ ಮಹಾರಾಜರು ಹೇಳುತ್ತಿದ್ದರು: 'ಮರ ಹತ್ತಲು ಪ್ರಯತ್ನಿಸುವವನು ಮಾತ್ರವೆ ಬೀಳಬಹುದಷ್ಟೆ. ಕೆಳಗೆ ಮಲಗಿರುವವನು ಬೀಳುವುದಾದರೂ ಹೇಗೆ?'

ಕೇದಾರ ಬಾಬಾ ಒಮ್ಮೆ ಠಾಕೂರರ ಉತ್ಸವದ ಸಮಯದಲ್ಲಿ ಜಯರಾಂಬಾಟಿಯಲ್ಲಿದ್ದರು. ಅವರು 'ಠಾಕೂರರ ಉತ್ಸವವನ್ನು ಹೇಗೆ ತಾನೆ ಆಚರಿಸುವುದು?' ಎಂದು ಶ್ರೀಮಾತೆಯವರನ್ನು ಕೇಳಿದಾಗ ಅವರು ಹೀಗೆ ಹೇಳಿದರು, 'ಅದೆ ಅಂದುಕೊಳ್ಳುತ್ತಿದ್ದೆ. ಏನು ಮಾಡುವುದಪ್ಪ? ಉತ್ಸವವನ್ನು ಆಚರಿಸಲು ಬೇಕಾದ ಭಕ್ತಿಯೂ ಇಲ್ಲ, ಶಕ್ತಿಯೂ ಇಲ್ಲ!' (ಹೀಗೆಂದ ಮಾರನೆಯ ದಿನ ಬಾಂಕುರಾದ ವಿಭೂತಿಘೋಷ್ ಎತ್ತಿನಗಾಡಿಯಲ್ಲಿ ಬೇಕಾದಷ್ಟು ಆಹಾರಸಾಮಗ್ರಿಗಳೊಂದಿಗೆ ಹಾಜರಾದರು. ಠಾಕೂರರ ಉತ್ಸವವು ವಿಜೃಂಭಣೆಯಿಂದ ಜರುಗಿತು)

*(ಸಮಾಪ್ತಿ)*